# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ
ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,

**ಸಿ.ಸಿ. ನಂಃ 1694/2022**

ಫಿರ್ಯಾಧಿದಾರಃ  ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ

// ವಿರುದ್ದ //

ಆರೋಪಿತರು ಃ ಶೇಖಮ್ಮ ಮತ್ತು ಇತರರು.

## ದೋಷಾರೋಪಣೆ

**ಆರೋಪಿತರುಃ**

1. ಶ್ರೀಮತಿ ಶೇಖಮ್ಮ ಗಂಡ ಶರಣಪ್ಪ ದನಕಾಯೋರ
   ವಃ 55 ವರ್ಷ,
2. ಪ್ರಭು @ ಪ್ರಭುಲಿಂಗ ತಂದೆ ಶರಣಪ್ಪ ದನಕಾಯೋರ
   ವಃ 23 ವರ್ಷ,
3. ದೇವರಾಜ ತಂದೆ ಶರಣಪ್ಪ ದನಕಾಯೋರ
   ವಃ 22 ವರ್ಷ,
4. ಸೋಮಪ್ಪ @ ಸೋಮರೆಡ್ಡಿ ತಂದೆ ಶರಣಪ್ಪ ದನಕಾಯೋರ
   ವಃ 28 ವರ್ಷ,
5. ಶಿವಪ್ಪ @ ಶವಕುಮಾರ ತಂದೆ ಶರಣಪ್ಪ ದನಕಾಯೋರ
   ವಃ 30 ವರ್ಷ,
6. ಬಿ. ಮಹಾದೇವ ತಂದೆ ಬಿ.ನಾಗೇಶ್ವರ @ ನಾಗಪ್ಪ ಮಾಸ್ತರ
   ವಃ 19 ವರ್ಷ,

   ಎಲ್ಲಾರು ಸಾಃ ಬಾಲಚೇಡ ಗ್ರಾಮ,
   ತಾಃ ಮತ್ತು ಜಿಃ ಯಾದಗರಿ.

**ಆರೋಪಿತರಾದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ದಿನಾಂಕ 26.06.2022 ರಂದು ಮಃ 12-30 ಗಂಟೆ ಸುಮಾರಿಗೆ ಸೈದಾಪೂರ ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ಬಾಲಚೇಡ ಗ್ರಾಮ ಸೀಮಾಂತರದ ಪಿರ್ಯಾದಿಯ ಜಮೀನುದಲ್ಲಿ 1 ರಿಂದ 6 ಆರೋಪಿತರಾದ ನೀವು ಅಕ್ರಮಕೂಟ ಕಟ್ಟಿಕೊಂಡು ಹೋಗಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.143 ಸಹ ಕಲಂ. 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ದೊಂಬಿ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಹೋಗಿ ದೊಂಬಿ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.147 ಸಹ ಕಲಂ. 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ನಿಮ್ಮ ಕೈಯಲ್ಲಿ ಮಾರಕಾಸ್ತ್ರಗಳಾದ ಕಟ್ಟಿಗೆ ಬಡಿಗೆ, ಕಬ್ಬಿಣ್ಣದ ರಾಡು ಮತ್ತು ಕಲ್ಲು ಹಿಡಿದುಕೊಂಡು ಹೋಗಿ ದೊಂಬಿ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.148 ಸಹ ಕಲಂ.149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಬಾಲಚೇಡ ಗ್ರಾಮದ ಸೀಮಾಂತರದ ಪಿರ್ಯಾದಿಯ ಜಮೀನುನಲ್ಲಿ ಅತಿಕ್ರಮಣ ಪ್ರವೇಶ ಮಾಡಿ ಚಾಸಾಃ1 ರವರ ಜೋತೆಗೆ ತಕರಾರು ಮಾಡಿದ್ದು,ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ

ಕಲಂ.447 ಸಹ ಕಲಂ.149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**5.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ 6ನೇ ಆರೋಪಿಯಾದ ನೀನು ಚಾಸಾಃ1 ನೇದ್ದವರ ಗಟ್ಟಿಯಾಗಿ ಹಿಡಿದುಕೊಂಡು ಅಡ್ಡಗಟ್ಟಿ ನಿಲ್ಲಿಸಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.341 ಸಹ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**6.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ, 1ನೇ ಆರೋಪಿಯಾದ ನೀನು ಚಾಸಾಃ1 ನೇದ್ದವನಿಗೆ ನೀನು ಯಾವನಲೋ ಕೇಳೋದಿಕ್ಕೆ, ಯಾವನಿಗೆ ಹುಟ್ಟೇದೀ, ಮಿಂಡಗಾರಗೆ ಹುಟ್ಟಿದವನೇ ಅಂತಾ ಅವಾಚ್ಯವಾಗಿ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ. 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**7.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ, 1ನೇ ಆರೋಪಿತರಾದ ನೀವು ಚಾಸಾಃ1 ರವರನ್ನು ತಲೆಯ ಕೂದಲು ಹಿಡಿದು ಕೆಳಗೆ ಬಗ್ಗಿಸಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**8.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ, 3 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಬೆನ್ನಿಗೆ ಬಡಿಗೆಯಿಂದ ಹೊಡೆದು ಗುಪ್ತಗಾಯ ಮಾಡಿದ್ದು, 2 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಕಬ್ಬಿಣದ ರಾಡನಿಂದ ಬಲಗೈ ತೋಳಿಗೆ ಹೊಡೆದು ರಕ್ತಗಾಯ ಮಾಡಿ ು ಡಗಡೇ ಭುಜಕ್ಕೆ ಹಲ್ಲಿನಿಂದ ಕಡಿದು ರಕ್ತಗಾಯ ಮಾಡಿದ್ದು, 5 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಕಲ್ಲಿನಿಂದ ಹೊಡೆದು ಎಡಗಾಲು ಮಧ್ಯದ ಬೆರಳಿಗೆ ಪೆಟ್ಟು ಮಾಡಿದ್ದು,4 ನೇ ಆರೋಪಿಯಾದ ನೀನು ಚಾಸಾಃ4 ರವರಿಗೆ ಕಲ್ಲಿನಿಂದ ಹೊಡೆದು ರಕ್ತಗಾಯ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.324 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**9.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ, ಚಾಸಾಃ5 ಮತ್ತು 6 ರವರು ಜಗಳ ಬಿಡಿಸಿ ಮನೆಗೆ ಹೋಗುತ್ತಿರುವಾಗ ಆರೋಪಿತರಾದ ನೀವು ಚಾಸಾಃ1 ರವರಿಗೆ ಇವತ್ತು ನಮ್ಮ ಕೈಯಾಗ ಉಳದೀದಿ ಸೂಳೇ ಮಗನೇ ಇನ್ನೊಮ್ಮೆ ಹೊಲದ ಸಮೀಪ ಬಂದರೆ ಇಲ್ಲಿಯೇ ಜೀವಂತ ಸಾಯಿಸುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **10.01.2024.**
ಸ್ಥಳಃ ಯಾದಗಿರಿ

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ಯಾದಗಿರಿ.